<u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 77 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 11.08.2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ 2023 ರಿಂದ 2025ರವರೆಗೆ ಆಹಾರ ಮತ್ತು ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಿಂದ ಎಷ್ಟು ಆಹಾರ ಪದಾರ್ಥಗಳನ್ನು ಕಳಪೆ ಎಂದು ಪತ್ತೆ ಮಾಡಲಾಗಿದೆ; ಪತ್ತೆ ಮಾಡಿದ್ದರೆ ಇದರ ಬಗ್ಗೆ ಕೈಗೊಂಡ ಕ್ರಮವೇನು; | ರಾಜ್ಯದಲ್ಲಿ 2023-2025ರವರೆಗೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಹಾರ ಸುರಕ್ಷತೆ ವಿಭಾಗದಿಂದ 54856 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದ್ದು, ಅವುಗಳಲ್ಲಿ 423 ಮಾದರಿಗಳು ಅಸುರಕ್ಷಿತ ಎಂದು, 363 ಮಾದರಿಗಳು Substandard ಎಂದು ವರದಿಯಾಗಿರುತ್ತವೆ.<br><br>ಅಸುರಕ್ಷಿತ ಎಂದು ವರದಿಯಾದ 423 ಆಹಾರ ಮಾದರಿಗಳಲ್ಲಿ 236 ಪ್ರಕರಣಗಳನ್ನು JMFC ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ. ಇವುಗಳಲ್ಲಿ 18 ಪ್ರಕರಣಗಳು ಇತ್ಯರ್ಥವಾಗಿದ್ದು, ರೂ.5,40,000/-ಗಳ ದಂಡ ವಿಧಿಸಲಾಗಿರುತ್ತದೆ. 218 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಉಳಿದ 187 ಮಾದರಿಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸುವ ಕಾನೂನು ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>Substandard ಎಂದು ವರದಿಯಾದ 363 ಆಹಾರ ಮಾದರಿಗಳಲ್ಲಿ 313 ಪ್ರಕರಣಗಳನ್ನು ಅಪರ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ. ಇವುಗಳಲ್ಲಿ 241 ಪ್ರಕರಣಗಳು ಇತ್ಯರ್ಥವಾಗಿದ್ದು, ರೂ.47,80,000/-ಗಳ ದಂಡ ವಿಧಿಸಲಾಗಿರುತ್ತದೆ. 72 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಉಳಿದ 50 ಮಾದರಿಗಳಿಗೆ |

| | | |
|---|---|---|
| | | ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸುವ ಕಾನೂನು ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| ಆ | ರಾಜ್ಯದಲ್ಲಿ 2023 ರಿಂದ 2025ರವರೆಗೆ ಆಹಾರ ಮತ್ತು ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಿಂದ ಕಳಪೆ ಎಷ್ಟು ಆಹಾರ ಪದಾರ್ಥಗಳ ಕುರಿತು ಜನಜಾಗೃತಿ ಅಭಿಯಾನ ಮಾಡಲಾಗಿದೆಯೇ; ಮಾಡಿದ್ದರೆ ಹೇಗೆ ಮಾಡಲಾಗಿದೆ ಮತ್ತು ಇದನ್ನು ಯಾವ ರೀತಿಯಲ್ಲಿ ಅಭಿಯಾನ ಮಾಡಲಾಗಿದೆ ಹಾಗೂ ಸರ್ಕಾರ ಇದಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ; ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಅಭಿಯಾನ ಮಾಡಲಾಗಿದೆ? (ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ 2023 ರಿಂದ 2025ರವರೆಗೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಹಾರ ಸುರಕ್ಷತೆ ವಿಭಾಗದಿಂದ ಸಾರ್ವಜನಿಕರಿಗೆ ಸುರಕ್ಷಿತ ಮತ್ತು ಗುಣಮಟ್ಟದ ಆಹಾರ ಒದಗಿಸುವ ಸಂಬಂಧ ಹಾಗೂ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ತಡೆಗಟ್ಟುವ ಸಲುವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಾದ್ಯಂತ ದೂರದರ್ಶನ, ರೇಡಿಯೋಗಳಲ್ಲಿ ಜಾಹಿರಾತುಗಳು ಮತ್ತು ಫೋನ್ ಇನ್ ಕಾರ್ಯಕ್ರಮಗಳು, ಬಸ್ ಸ್ಟ್ಯಾಂಡ್ ಗಳಲ್ಲಿ ಜಾಹಿರಾತುಗಳು ಮತ್ತು ಧ್ವನಿ ವರ್ಧಕ ಪ್ರಕಟಣೆಗಳು, ಸಿನಿಮಾ ಮಂದಿರ, ಪತ್ರಿಕೆಗಳು, ಬಸ್ ಮತ್ತು ರೈಲು ಬೋಗಿಗಳ ಮೇಲೆ ಜಾಹಿರಾತುಗಳು, ಸ್ಟ್ಯಾಂಡಿಗಳು, ಹೋರ್ಡಿಂಗ್ಸ್‌ಗಳು, ಮತ್ತು ಕರಪತ್ರಗಳ ಮೂಲಕ ಜನ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಜನಜಾಗೃತಿ ಕಾರ್ಯಕ್ರಮಗಳಿಗೆ 2023 ರಿಂದ 2025 ರವರೆಗೆ ರೂ. 360.80 ಲಕ್ಷಗಳ ಹಣವನ್ನು ಖರ್ಚು ಮಾಡಲಾಗಿರುತ್ತದೆ. |

ಆಕುಕ 79 ಎಸ್‌ಬಿವಿ 2025

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು